# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1264

ಸದಸ್ಯರ ಹೆಸರು : ಶ್ರೀ. ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ)

ಉತ್ತರಿಸುವವರು : ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲ ಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು.

ಉತ್ತರಿಸಬೇಕಾದ ದಿನಾಂಕ : 08-03-2022

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಒಟ್ಟು ಎಷ್ಟು ಬಾಲಕರ ಹಾಗೂ ಬಾಲಕಿಯರ ಬಾಲ ಮಂದಿರಗಳಿವೆ; ಅವುಗಳಲ್ಲಿ ಎಷ್ಟು ವಿದ್ಯಾರ್ಥಿಗಳು ಆಶ್ರಯ ಪಡೆದಿರುತ್ತಾರೆ. (ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳ ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಒಟ್ಟು 69 ಬಾಲಮಂದಿರಗಳಿದ್ದು, ಇದರಲ್ಲಿ 36 ಬಾಲಕರ ಬಾಲಮಂದಿರ ಹಾಗೂ 33 ಬಾಲಕಿಯರ ಬಾಲಮಂದಿರಗಳಾಗಿವೆ. ಈ ಬಾಲಮಂದಿರಗಳಲ್ಲಿ ಒಟ್ಟು 2037 ಮಕ್ಕಳು ಆಶ್ರಯ ಪಡೆದಿರುತ್ತಾರೆ. ಕಲ್ಯಾಣ ಕರ್ನಾಟಕ ಭಾಗದ ಬಾಲಮಂದಿರಗಳಲ್ಲಿ ಜಿಲ್ಲಾವಾರು ಆಶ್ರಯ ಪಡೆದಿರುವ ಮಕ್ಕಳ ಸಂಖ್ಯೆಯನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ. |
| ಆ) | ರಾಜ್ಯದಲ್ಲಿರುವ ಒಟ್ಟು ಮಹಿಳಾ ನಿಲಯಗಳ ಸಂಖ್ಯೆ ಎಷ್ಟು; ಮತ್ತು ಅದರಲ್ಲಿ ಆಶ್ರಯ ಪಡೆದ ಮಹಿಳೆಯರ ಸಂಖ್ಯೆ ಎಷ್ಟು; (ವಿವರ ನೀಡುವುದು) | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ 4 ಸ್ವೀಕಾರ ಕೇಂದ್ರಗಳು ಮತ್ತು 8 ರಾಜ್ಯ ಮಹಿಳಾ ನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, 661 ಮಹಿಳೆಯರು ಮತ್ತು 33 ಮಕ್ಕಳು (ತಾಯಿಯ ಜೊತೆ) ಆಶ್ರಯ ಪಡೆದಿರುತ್ತಾರೆ. ವಿವರವನ್ನು ಅನುಬಂಧ-2 ನೀಡಲಾಗಿದೆ. |
| ಇ) | ರಾಜ್ಯದಲ್ಲಿರುವ ಬಾಲಮಂದಿರ ಹಾಗೂ ಮಹಿಳಾ ನಿಲಯಗಳ ನಿರ್ವಹಣೆಗಾಗಿ ಎಷ್ಟು ಸಮಾಜ ಕಾರ್ಯಕರ್ತೆಯರು ಹಾಗೂ ಅಧೀಕ್ಷಕರು ಮತ್ತು ಪ್ರಥಮ ದರ್ಜೆ ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ; | ಎಲ್ಲಾ ಸರ್ಕಾರಿ ಬಾಲಮಂದಿರಗಳಲ್ಲಿ ಒಬ್ಬರು ಅಧೀಕ್ಷಕರು ಮತ್ತು ಒಬ್ಬರು ಪ್ರಥಮ ದರ್ಜೆ ಸಹಾಯಕರು ಇನ್ನಿತರೆ ಸಿಬ್ಬಂದಿಗಳೊಂದಿಗೆ ಕಾರ್ಯನಿರ್ವಹಿಸುತ್ತಾರೆ. ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳಲ್ಲಿ ಇಬ್ಬರು ಸಮಾಜ ಸೇವಾ ಕಾರ್ಯಕರ್ತರು ಕಾರ್ಯನಿರ್ವಹಿಸುತ್ತಿದ್ದಾರೆ.<br>ಸ್ವೀಕಾರ ಕೇಂದ್ರ ಮತ್ತು ರಾಜ್ಯ ಮಹಿಳಾ ನಿಲಯಗಳಲ್ಲಿ ಸಮಾಜ ಕಾರ್ಯಕರ್ತೆಯರ ಹುದ್ದೆ ಮಂಜೂರಾಗಿರುವುದಿಲ್ಲ. 12 ಅಧೀಕ್ಷಕರ ಹುದ್ದೆ ಮಂಜೂರಾಗಿದ್ದು 5 ಹುದ್ದೆಗಳು ಮಾತ್ರ ಭರ್ತಿಯಾಗಿದ್ದು 7 ಸಂಸ್ಥೆಗಳಲ್ಲಿ ಪ್ರಭಾರಿ ಅಧೀಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ.<br>ರಾಜ್ಯ ಮಹಿಳಾ ನಿಲಯದಲ್ಲಿ 11 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳು ಮಂಜೂರಾಗಿದ್ದು 9 ಪ್ರಥಮ ದರ್ಜೆ ಸಹಾಯಕರು ಕಾರ್ಯನಿರ್ವಹಿಸುತ್ತಿದ್ದು 2 ಹುದ್ದೆಗಳು ಖಾಲಿ ಇರುತ್ತದೆ. ವಿವರಗಳನ್ನು ಅನುಬಂಧ-3 ರಲ್ಲಿ ನೀಡಲಾಗಿದೆ. |

ಈ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಲ್ಲಿ ಮಂಜೂರಾದ ಒಟ್ಟು ಹುದ್ದೆಗಳು ಎಷ್ಟು; ಅವುಗಳಲ್ಲಿ ಎಷ್ಟು ಹುದ್ದೆಗಳು ನಿಧನ, ನಿವೃತ್ತಿ ಮತ್ತು ರಾಜೀನಾಮೆಯಿಂದ ತೆರವಾಗಿವೆ? (ವೃಂದವಾರು ಮಾಹಿತಿ ನೀಡುವುದು)

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ವೃಂದವಾರು ಮಂಜೂರು/ಭರ್ತಿ/ಖಾಲಿ ಹುದ್ದೆಗಳ ಮಾಹಿತಿ ಈ ಕೆಳಗಿನಂತಿರುತ್ತದೆ.

| ವೃಂದ | ಮಂಜೂರು | ಭರ್ತಿ | ಖಾಲಿ |
|---|---|---|---|
| "ಎ" | 357 | 213 | 144 |
| "ಬಿ" | 332 | 216 | 116 |
| "ಸಿ" | 4669 | 3041 | 1628 |
| "ಡಿ" | 949 | 181 | 768 |
| **ಒಟ್ಟು** | **6307** | **3651** | **2656** |

ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಲ್ಲಿ ಮಂಜೂರಾದ ವೃಂದವಾರು ಹುದ್ದೆಗಳ ವಿವರ ಈ ಕೆಳಗಿನಂತಿದೆ:

| ವೃಂದ | ಮಂಜೂರು | ಭರ್ತಿ | ಖಾಲಿ |
|---|---|---|---|
| "ಎ" | 05 | 04 | 01 |
| "ಬಿ" | 49 | 28 | 21 |
| "ಸಿ" | 259 | 132 | 127 |
| "ಡಿ" | 151 | 151 | 00 |
| **ಒಟ್ಟು** | **464** | **315** | **149** |

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಲ್ಲಿ ಮಂಜೂರಾದ ಒಟ್ಟು ಹುದ್ದೆಗಳು 75, ನಿಧನ, ನಿವೃತ್ತಿ ಮತ್ತು ರಾಜೀನಾಮೆಯಿಂದ ತೆರವಾಗಿರುವ ಹುದ್ದೆಗಳ ವಿವರ ಕೆಳಗಿನಂತಿದೆ:

| ವೃಂದ | ಮಂಜೂರು | ಭರ್ತಿ | ಖಾಲಿ |
|---|---|---|---|
| "ಎ" | 07 | 04 | 03 |
| "ಬಿ" | 03 | 03 | 0 |
| "ಸಿ" | 58 | 34 | 24 |
| "ಡಿ" | 07 | 03 | 04 |
| **ಒಟ್ಟು** | **75** | **44** | **31** |

ಕರ್ನಾಟಕ ರಾಜ್ಯ ಮಹಿಳಾ ಆಯೋಗದಲ್ಲಿ ವೃಂದ ಮತ್ತು ನೇಮಕಾತಿ ನಿಯಮದಡಿ ಒಟ್ಟು ಮಂಜೂರಾದ ಹುದ್ದೆಗಳು-18, ಈ ಹುದ್ದೆಗಳನ್ನು ನಿಯೋಜನೆ, ಹೊರಗುತ್ತಿಗೆ ಆಧಾರದ ಮೇರೆಗೆ ತುಂಬಲಾಗಿದೆ.

ಸಂಖ್ಯೆ: ಮಮಇ 32 ಮಭಾಬ 2022

(ಆಚಾರ್ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತುಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು.

| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಶಶೀಲ್ ಜಿ. ನಮೋಶಿ(ಶಿಕ್ಷಕರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1121(1264) ಕ್ಕೆ | | | | |
|---|---|---|---|---|
| ಅನುಬಂಧ-1 | | | | |
| ಕಲ್ಯಾಣ ಕರ್ನಾಟಕ ಜಿಲ್ಲೆಗಳ ಮಕ್ಕಳ ಪಾಲನಾ ಸಂಸ್ಥೆಗಳಿರುವ ಜಿಲ್ಲಾವಾರು ಮಕ್ಕಳ ಮಾಹಿತಿ (ದಿನಾಂಕ:04.03.2022 ರಂತೆ) | | | | |
| ಕ್ರ.ಸಂ | ಜಿಲ್ಲೆಗಳ ಹೆಸರು | ಗಂಡು ಮಕ್ಕಳ ಸಂಖ್ಯೆ | ಹೆಣ್ಣು ಮಕ್ಕಳ ಸಂಖ್ಯೆ | ಒಟ್ಟು ಮಕ್ಕಳ ಸಂಖ್ಯೆ |
| 1 | ವಿಜಯಪುರ | 63 | 56 | 119 |
| 2 | ಕೊಪ್ಪಳ | 25 | 20 | 45 |
| 3 | ಬಳ್ಳಾರಿ | 77 | 25 | 102 |
| 4 | ಬೀದರ್ | 37 | 69 | 106 |
| 5 | ರಾಯಚೂರು | 28 | 21 | 49 |
| 6 | ಕಲಬುರ್ಗಿ | 27 | 74 | 101 |
| 7 | ಯಾದಗಿರಿ | 0 | 45 | 45 |
| ಒಟ್ಟು | | **257** | **310** | 567 |

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಶಶೀಲ್ ಜಿ. ನಮೋಶಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1264.

ಅನುಬಂಧ - 2

## ರಾಜ್ಯ ಮಹಿಳಾ ನಿಲಯಗಳಲ್ಲಿ ಆಶ್ರಯ ಪಡೆದ ಮಹಿಳೆಯರು

| ಕ್ರ.ಸಂ | ಸಂಸ್ಥೆಯ ಹೆಸರು | ಆಶ್ರಯ ಪಡೆದ ಮಹಿಳೆಯರ ಸಂಖ್ಯೆ | |
|---|---|---|---|
| | | ಮಹಿಳೆಯರ ಸಂಖ್ಯೆ | ತಾಯಿಯ ಜೊತೆಯಿರುವ ಮಕ್ಕಳ ಸಂಖ್ಯೆ |
| 1 | ಸ್ವೀಕಾರ ಕೇಂದ್ರ, ಬೆಂಗಳೂರು(ನ) | 15 | 3 |
| 2 | ಸ್ವೀಕಾರ ಕೇಂದ್ರ, ಕಾರವಾರ | 6 | 1 |
| 3 | ಸ್ವೀಕಾರ ಕೇಂದ್ರ, ತುಮಕೂರು | 11 | 1 |
| 4 | ಸ್ವೀಕಾರ ಕೇಂದ್ರ, ಗದಗ | 6 | 1 |
| 1 | ರಾಜ್ಯ ಮಹಿಳಾ ನಿಲಯ, ಬೆಂಗಳೂರು(ನ) | 107 | 4 |
| 2 | ರಾಜ್ಯ ಮಹಿಳಾ ನಿಲಯ, ಬಳ್ಳಾರಿ | 75 | 2 |
| 3 | ರಾಜ್ಯ ಮಹಿಳಾ ನಿಲಯ, ದಾವಣಗೆರೆ | 53 | 8 |
| 4 | ರಾಜ್ಯ ಮಹಿಳಾ ನಿಲಯ, ಕಲಬುರಗಿ | 83 | 6 |
| 5 | ರಾಜ್ಯ ಮಹಿಳಾ ನಿಲಯ, ಧಾರವಾಡ | 76 | 0 |
| 6 | ರಾಜ್ಯ ಮಹಿಳಾ ನಿಲಯ, ಮೈಸೂರು | 59 | 3 |
| 7 | ರಾಜ್ಯ ಮಹಿಳಾ ನಿಲಯ, ಉಡುಪಿ | 65 | 4 |
| 8 | ರಾಜ್ಯ ಮಹಿಳಾ ನಿಲಯ, ಶಿವಮೊಗ್ಗ | 105 | 0 |
| | **ಒಟ್ಟು** | **661** | **33** |

ನಿರ್ದೇಶಕರು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಬೆಂಗಳೂರು

ಅನುಬಂಧ - ೩

## ಮಹಿಳಾ ನಿಲಯಗಳಿಗೆ ಮಂಜೂರಾದ ಹುದ್ದೆಗಳ ಮಾಹಿತಿ

| ಕ್ರ.ಸಂ | ಸಂಸ್ಥೆಯ ಹೆಸರು | ಅಧೀಕ್ಷಕರು | | | ಪ್ರಥಮ ದರ್ಜೆ ಸಹಾಯಕರು | | |
|---|---|---|---|---|---|---|---|
| | | ಮಂಜೂರು | ಭರ್ತಿ | ಖಾಲಿ | ಮಂಜೂರು | ಭರ್ತಿ | ಖಾಲಿ |
| 1 | ಸ್ವೀಕಾರ ಕೇಂದ್ರ, ಬೆಂಗಳೂರು(ನ) | 1 | 0 | 1 | 0 | 0 | 0 |
| 2 | ಸ್ವೀಕಾರ ಕೇಂದ್ರ, ಕಾರವಾರ | 1 | 0 | 1 | 0 | 0 | 0 |
| 3 | ಸ್ವೀಕಾರ ಕೇಂದ್ರ, ತುಮಕೂರು | 1 | 0 | 1 | 0 | 0 | 0 |
| 4 | ಸ್ವೀಕಾರ ಕೇಂದ್ರ, ಗದಗ | 1 | 1 | 0 | 0 | 0 | 0 |
| 1 | ರಾಜ್ಯ ಮಹಿಳಾ ನಿಲಯ, ಬೆಂಗಳೂರು(ನ) | 1 | 1 | 0 | 1 | 0 | 1 |
| 2 | ರಾಜ್ಯ ಮಹಿಳಾ ನಿಲಯ, ಬಳ್ಳಾರಿ | 1 | 1 | 0 | 3 | 2 | 1 |
| 3 | ರಾಜ್ಯ ಮಹಿಳಾ ನಿಲಯ, ದಾವಣಗೆರೆ | 1 | 0 | 1 | 1 | 1 | 0 |
| 4 | ರಾಜ್ಯ ಮಹಿಳಾ ನಿಲಯ, ಕಲಬುರಗಿ | 1 | 0 | 1 | 1 | 1 | 0 |
| 5 | ರಾಜ್ಯ ಮಹಿಳಾ ನಿಲಯ, ಧಾರವಾಡ | 1 | 1 | 0 | 1 | 1 | 0 |
| 6 | ರಾಜ್ಯ ಮಹಿಳಾ ನಿಲಯ, ಮೈಸೂರು | 1 | 1 | 0 | 2 | 2 | 0 |
| 7 | ರಾಜ್ಯ ಮಹಿಳಾ ನಿಲಯ, ಉಡುಪಿ | 1 | 0 | 1 | 1 | 1 | 0 |
| 8 | ರಾಜ್ಯ ಮಹಿಳಾ ನಿಲಯ, ಶಿವಮೊಗ್ಗ | 1 | 0 | 1 | 1 | 1 | 0 |
| | ಒಟ್ಟು | **12** | **5** | **7** | **11** | **9** | **2** |

ನಿರ್ದೇಶಕರು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಬೆಂಗಳೂರು